ಹುಟ್ಟಿ ಬೆಳೆದೆನಲ್ಲಾ ಹಾಗೆ ತನ್ನ ಐಶ್ವರ್ಯವೂ ತನ್ನಷ್ಟಕ್ಕೇ ಬೆಳೆಯುತ್ತದೆ ಎಂದುಕೊಂಡಿರುವವನಿಗೆ ಏಳ್ಗೆ ಇಲ್ಲ.

ಧೃತರಾಷ್ಟ್ರ: ನಿನ್ನ ಮಾತು ನನಗೆ ಹಿಡಿಸುತ್ತಾ ಇಲ್ಲ

ಆದರೆ ಮನುಷ್ಯರಿಗೆಲ್ಲಾ ರಾಜ ನೀನು. ಇಷ್ಟ ಬಂದ ಹಾಗೆ ಮಾಡಿಕೋ

ಆದರೆ ನೀನಾಡುತ್ತಿರುವ ಮಾತು ಧರ್ಮಿಷ್ಟರದಲ್ಲ

ನಿನ್ನ ಮಾತಿಗೆ ನಾಳೆ ನೀನೇ ಸಂತಾಪ ಪಡತೀಯ

ಹೀಗಾಗತ್ತೆ ಅಂತ ಯಾವತ್ತೋ ಗೊತ್ತಿತ್ತು. ವಿಧಿಯ ಕೈಯಲ್ಲಿ ಬುದ್ಧಿ ಕೊಟ್ಟವನು ವಿದುರ

ಇಂಥದೇನೋ ಆಗಿಯೇ ತೀರಬೇಕು ವಿನಾಶ ಸದ್ಯದಲ್ಲೇ ಕಾದಿದೆ ಎಂದು ಅವತ್ತೆ ಹೇಳಿದ್ದ

ವೈಶಂಪಾಯನ: ಧೃತರಾಷ್ಟ್ರ ತಿಳಿದವನು ಹೇಳುವುದನ್ನು ಹೇಳಿದ

ಆದರೆ ನಡೆಯುವುದನ್ನು ತಪ್ಪಿಸುವುದು ದುಸ್ತರ ಅದು ದೈವಕ್ಕೆ ಬಿಟ್ಟದ್ದು ಎಂದುಕೊಂಡು 'ನನ್ನ ಮಗ ಏನು ಹೇಳುತ್ತಾನೋ ಅದನ್ನು ನಡೆಸಿ' ಎಂದು ಆಳುಗಳಿಗೆ ಅಪ್ಪಣೆ ಮಾಡಿದ. ವಿಧಿ ಅವನ ಚಿತ್ತಕ್ಕೆ ಮಂಕು ಕವಿಸಿತ್ತು.

ಸಾವಿರ ಕಂಬ: ಒಂದೊಂದಕ್ಕೂ ವೈಢೂರ್ಯದ ಕುಸುರಿ

ಸಾವಿರ ಬಾಗಿಲು: ಒಂದೊಂದಕ್ಕೂ ಸ್ಫಟಿಕದ ತೋರಣ ಕೂಗಳತೆ ಉದ್ದ, ಕೂಗಳತೆ ಎತ್ತರ. ಕೂಗಳತೆ ಅಗಲದ ಸಭೆ. ತಕ್ಷಣ ತಯಾರಾಗಬೇಕು'

ತಡವಾಗಲೇ ಇಲ್ಲ

ಅದನ್ನ ಕೇಳಿ ಸಾವಿರಾರು ಜನ ಶಿಲ್ಪಿಗಳು ಬಂದರು

ಹಿಂದೆ ಮುಂದೆ ನೋಡಲೂ ಇಲ್ಲ

ರಾಜಾಜ್ಞೆಗೆ ತಕ್ಕದಾಗಿ ಬೇಕಾದ ಸರಂಜಾಮನ್ನೆಲ್ಲ ಕೂಡಿಸಿಕೊಂಡು ಅಚ್ಚುಕಟ್ಟಾಗಿ ಚೆಲುವಾಗಿ ಕಟ್ಟಿಯೇ ಬಿಟ್ಟರು

ರಾಜನ ಹತ್ತಿರ ಬಂದರು. 'ರತ್ನ ಖಚಿತವಾದ ವರ್ಣರಂಜಿತ ಸಭೆ ಅದರ ತುಂಬಾ ಬಂಗಾರದ ಪೀಠಗಳು ಸಜ್ಜಾಗಿದೆ ಮಾಸ್ವಾಮಿ' ಎಂದರು.

ಆಗ ಧೃತರಾಷ್ಟ್ರ ತನ್ನ ಮಂತ್ರಿಗಳಲ್ಲೇ ಮೇಲಾದ ವಿದುರನನ್ನು ಕರೆದ

ಧೃತರಾಷ್ಟ್ರ: ಹೋಗು, ರಾಜಕುಮಾರ ಯುಧಿಷ್ಠಿರನನ್ನು ನಾನು ಕರೆದೆ ಎಂದು ಬೇಗ ಕರೆದುಕೊಂಡು ಬಾ

'ರತ್ನಮಯವಾದ ಸಭೆಯನ್ನು ಕಟ್ಟಿಸಿದೇನೆ

ರತ್ನದ ಕುಸುರಿ ಬಂಗಾರದ ಪೀಠಗಳು

ತನ್ನ ತಮ್ಮಂದಿರ ಸಮೇತ ಬಂದು ನೋಡಲೇ ಬೇಕು

ಹಾಗೇ ಸ್ನೇಹಭಾವದಲ್ಲಿ ಒಂದೆರಡಾಟ ಜೂಜನ್ನು ಆಡತೀರಂತೆ ಎಂದು ನಾನು ಹೇಳಿದೆ' ಎಂದು ಹೇಳು

ಮಗನ ಆಸೆಯನ್ನ ಇವನು ಆಜ್ಞೆ ಮಾಡಿದ

ವಿಧಿ ದುಸ್ತರ ಎಂದುಕೊಂಡು ಹೀಗೆ ಮಾಡಿದ. ರಾಜ ಹೇಳಿದ್ದು ಅನ್ಯಾಯದ ಮಾತು

ವಿದುರನಿಗೆ ಅಣ್ಣನ ಮಾತು ಹಿಡಿಸಲಿಲ್ಲ. ಅವನು ಅಂದ–

ವಿದುರ: ನಿನ್ನ ಆದೇಶ ನನಗೆ ಹಿಡಿಸಲಿಲ್ಲ

ಹಾಗೆ ಮಾಡಕೂಡದು. ಇದರಿಂದ ಕುಲದ ನಾಶವೇ ಆಗಿ ಬಿಡಬಹುದು

ಮಕ್ಕಳಲ್ಲಿ ಒಡಕಾದರೆ ಕಲಹದಲ್ಲೇ ಕೊನೆ ಅದಕ್ಕೆ

ಈ ಜೂಜಿನಿಂದ ಆಗುವುದು ಹೊಡೆದಾಟವೇನೋ ಎನ್ನುವ ಭಯ ನನಗೆ

ಧೃತರಾಷ್ಟ್ರ: ಯಾರ ಅದೃಷ್ಟವೂ ತಲೆ ಕೆಳಗಾಗುವ ಹಂಗೇನೂ ಕಾಣುವುದಿಲ್ಲ

ಜೂಜಿನಿಂದ ಹೊಡೆದಾಟ ಆಗುತ್ತೆ ಎಂಬ ಶಂಕೆ ನನಗಂತೂ ಇಲ್ಲ

ನಡೆಸುವವನ ಕೈಯಿಂದ ಜಗತ್ತು ನಡೆಯುತ್ತದೆ

ಯಾವುದೂ ತನ್ನಷ್ಟಕ್ಕೇ ನಡೆಯಲ್ಲ

ಅದರಿಂದ ಈಗಲೇ ಹೊರಡು. ಆ ಕುಂತಿಯ ಮಗನನ್ನ ಬೇಗ ಕರಕೊಂಡು ಬಾ. ಅವನನ್ನ ಮೆಟ್ಟಿ ಹಾಕುವುದು ಸಾಧ್ಯ ಇಲ್ಲ.

ನನ್ನ ಆದೇಶ ನಡೆಸು ■

# 'ಏನು ಮಾಡಲಿ, ಎಲ್ಲಾ ಆ ನಡೆಸುವವನ ಇಚ್ಛೆ'

ಕುಬೇರನ ಮನೆಗೆ ಸಮನಾದ ಅರಮನೆ ಅದು

ಧರ್ಮಾತ್ಮ, ಧರ್ಮಪುತ್ರನ ಬಳಿಗೆ ಬಂದ

ಅವನ ಸತ್ವವೇ ಅವನ ಧೈರ್ಯ

ಅವನಿಗೆ ಶತ್ರುಗಳು ಹುಟ್ಟಿಯೇ ಇಲ್ಲ ಅಂಥ ಯುಧಿಷ್ಠಿರ ವಿದುರನನ್ನು ಯಥಾವತ್ತು ಸತ್ಕರಿಸಿ ಒಳಕ್ಕೆ ಕರೆದುಕೊಂಡ.

ಯುಧಿಷ್ಠಿರ: ಅಪ್ಪಾಜಿ, ನಿನ್ನ ಮನಸ್ಸು ನೆಮ್ಮದಿಯಲ್ಲಿಲ್ಲ ಅಂತ ಕಾಣತ್ತೆ

ಹುಷಾರಾಗಿದೀಯ ತಾನೆ? ಅಲ್ಲಿ ಹಿರಿಯನ ಮಾತಿಗೆ

ಮಕ್ಕಳು ತಗ್ಗಿ ನಡೆಯುತ್ತಿದಾರೆ ತಾನೇ?

ವಿದುರ: ರಾಜ ಎಂದೂ ದೊಡ್ಡ ಮನುಷ್ಯನೇ. ಅವನ ಮಕ್ಕಳು ಚೆನ್ನಾಗೇ ಇದ್ದಾರೆ

ನೂರು ಮಕ್ಕಳ ಮಧ್ಯೆ ಇಂದ್ರನ ಹಾಗೆ ಮೆರೆಯುತ್ತಿದಾನೆ ರಾಜ

ಮಕ್ಕಳು ತಗ್ಗಿ ನಡೀತಿದಾರೆ ಯೋಚನೆ ಇಲ್ಲ ಅವನಿಗೆ. ತನ್ನಷ್ಟಕ್ಕೆ ತಾನು ಸುಖವಾಗಿದ್ದಾನೆ

ನಿಮ್ಮ ಕುಶಲ ಕೇಳಿದಾನೆ ಕುರುರಾಜ ಹೇಳಿ ಕಳುಹಿಸಿದ್ದಾನೆ ಹೀಗೆ:

'ಕಂದಾ, ನಿನಗೆ ತಕ್ಕಂತೆ ಸಭೆ ಕಟ್ಟಿಸಿದೇನೆ

ಪಾರ್ಥನ ಜತೆಗೆ ಉಳಿದ ತಮ್ಮಂದಿರನ್ನೂ ಕರೆದುಕೊಂಡು ನೋಡು ಬಾ

ಸ್ನೇಹದ ಜೂಜು ಆಡತಾ ಹಾಯಾಗಿದ್ದು ಖುಷಿ ಪಡೋಣ

ಕುರುವಂಶದವರೆಲ್ಲಾ ಬಂದು ಸೇರಿದಾರೆ. ನೀನು ನಮ್ಮ ಜತೆ ಸೇರಿಕೊಂಡರೆ ನನಗೆ ಖುಷಿಯಾಗುತ್ತದೆ'

ಧೃತರಾಷ್ಟ್ರ ಅಲ್ಲಿ ಜೂಜಾಟದವರನ್ನೆಲ್ಲ ಕಲೆ ಹಾಕಿದಾನೆ

ರಾಜನ ಮಾತು ತಂದಿದೇನೆ. ಒಪ್ಪಿಕೋ ರಾಜಾ

ಯುಧಿಷ್ಠಿರ: ಜೂಜಲ್ಲಿ ಕಲಹವೇ ಅಲ್ಲವಾ?

ತಿಳಿದೂ ತಿಳಿದೂ ಬುದ್ಧಿವಂತರು ಅದಕ್ಕೆ ಒಪ್ಪುವುದುಂಟ. ನಿಮಗೇನನಿಸುತ್ತದೆ

ಒಪ್ಪುವುದು ಸರೀನಾ? ನೀನು ತೋರಿಸಿದ ಹಾಗೆ ನಿಲ್ಲತೇನೆ

ವಿದುರ: ಜೂಜು ಅಂದರೆ ಕೇಡಿನ ಮೂಲ ನನಗೆ ಗೊತ್ತಿದೆ

ಇದನ್ನ ತಪ್ಪಿಸುವುದಕ್ಕೂ ಪ್ರಯತ್ನ ಮಾಡಿದೆ

ನಿನಗೆ ಮಹಾರಾಜ ಹೇಳಿ ಕಳಿಸಿದಂತೆ ನಾ ಹೇಳಿದ್ದನ್ನ

ನೀನು ಕೇಳಿಸಿಕೊಂಡಿದೀಯಾ. ಇನ್ನು ನಿನ್ನಿಷ್ಟ

ಯುಧಿಷ್ಠಿರ: ಧೃತರಾಷ್ಟ್ರ ಮಕ್ಕಳನ್ನ ಬಿಟ್ಟು

ಜೂಜುಗಾರರು ಇನ್ನು ಯಾರು ಯಾರು

ಹೇಳು ತಿಳಿದವನೆ, ಆ ನೂರಾರು ಜನದಲ್ಲಿ ನನ್ನ ಜತೆ ಆಡುವವನು ಯಾರು?

ವಿದುರ: ಆ ಗಾಂಧಾರದ ರಾಜ ಶಕುನಿ ಇದಾನೆ. ಜೂಜಲ್ಲಿ ಅವನದು ಅಂಥ ಕೈ

ಆಟದಲ್ಲಿ ನುರಿತ ಬುದ್ಧಿ. ಜತೆಗೆ ವಿವಂಶತಿ, ಚಿತ್ರಸೇನ, ಸತ್ಯವ್ರತ

ಪುರುಮಿತ್ರ, ಜಯ ಇವರೂ ಇದಾರೆ

ಯುಧಿಷ್ಠಿರ: ಅಪಾಯಕಾರಿಗಳೇ ಸೇರಿದಾರೆ, ಮಹಾ ಸಂಚುಗಾರರೇ ಎಲ್ಲರೂ

ಏನು ಮಾಡಲಿ! ಎಲ್ಲಾ ಆ ನಡೆಸುವವನ ಇಚ್ಛೆ

ಜಗತ್ತಲ್ಲಿ ಯಾವುದೂ ಸ್ವತಂತ್ರ ಅಲ್ಲ

ಧೃತರಾಷ್ಟ್ರನ ಆಜ್ಞೆ ಬೇರೆ ಅಂದೆ. ಆಟ ಆಡಲ್ಲ ಅನ್ನಲಾರೆ

ಅಪ್ಪನ ಮಾತನ್ನ ಮಗ ತೆಗೆದು ಹಾಕಬಾರದು

ಶಕುನಿಯ ಜತೆ ಆಡುವುದು ನನಗೆ ಇಷ್ಟ ಇಲ್ಲ. ಆದರೆ

ಅವನು ಕರೆದರೆ ಇಲ್ಲ ಎನ್ನಲಾರೆ

ಪಂಥಕ್ಕೆ ಬೆನ್ನು ತೋರಿಸುವುದಿಲ್ಲ ಎನ್ನುವುದು ನನ್ನ ವ್ರತ

ವೈಶಂಪಾಯನ: ಹೀಗೆಂದು ಹೇಳಿ ಪ್ರಯಾಣಕ್ಕೆ ಸಿದ್ಧತೆಗೆ ಆಜ್ಞೆ ಮಾಡಿದ

ಮಾರನೇ ದಿನವೇ ಬಳಗಸೈನ್ಯ

ದ್ರೌಪದಿ ಸಮೇತ ಹೆಂಗಸರು, ಎಲ್ಲರ ಜತೆ ಹೊರಟ

'ವಿಧಿ ಕಣಪ್ಪ ವಿಧಿ (ದೈವಂ)

ಎಚ್ಚರವೇ ಹೋಗಿ ಬಿಡತ್ತೆ. ಮಿಂಚಿಗೆ ದೃಷ್ಟಿ ಹೋಗುವ ಹಾಗೆ ನಡೆಸುವವನ ಕೈವಶ ಆಗಿ ಬಿಡತಾನೆ ಮನುಷ್ಯ ಪಾಶಕ್ಕೆ ಬಿದ್ದವನ ಹಾಗೆ'

ಹೀಗಂದುಕೊಂಡೇ ಹೊರಟ ವಿದುರನ ಜತೆ.

■